ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**07.01.2026 7.35 am**

**<><><*><><<>**

ಮುಖ್ಯಾಂಶಗಳು

**೧. ಭಾರತೀಯ ರೈಲ್ವೆಯ ೭೦ ಸಾವಿರ ಕಿಲೋಮೀಟರ್ ಬ್ರಾಡ್-ಗೇಜ್ ಜಾಲ ಸಂಪೂರ್ಣ ವಿದ್ಯುತ್ ಚಾಲಿತ**

**೨. ಲಕ್ಸೆಂಬರ್ಗ್‌ನ ವಿದೇಶಾಂಗ ಸಚಿವರೊಂದಿಗೆ ಕೇಂದ್ರ ಸಚಿವ ಡಾ. ಎಸ್.ಜೈಶಂಕರ್ ಮಾತುಕತೆ**

**೩. ರಷ್ಯಾ-ಉಕ್ರೇನ್ ಸಂಘರ್ಷವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಅಮೆರಿಕ ನಿಯೋಗದೊಂದಿಗೆ ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿ ಸಭೆ**

**೪. ಬ್ರಿಟಿಷ್ ಜೂನಿಯರ್ ಓಪನ್ ಸ್ಕ್ವಾಷ್ ಚಾಂಪಿಯನ್‌ಶಿಪ್: ಫೈನಲ್‌ಗೆ ಭಾರತದ ಅನಾಹತ್ ಸಿಂಗ್ ಮುನ್ನಡೆ**

**<><><*><><<>**

ಭಾರತೀಯ ರೈಲ್ವೆ ವಿಶ್ವದ ಅತ್ಯಂತ ವ್ಯಾಪಕವಾಗಿ ವಿದ್ಯುದ್ದೀಕರಿಸಲ್ಪಟ್ಟ ರೈಲು ವ್ಯವಸ್ಥೆಗಳಲ್ಲಿ ಒಂದಾಗಿದೆ. ಭಾರತದ ಬಹುತೇಕ ಎಲ್ಲಾ ೭೦ ಸಾವಿರ ಕಿಲೋಮೀಟರ್ ಬ್ರಾಡ್-ಗೇಜ್ ಜಾಲವು ಈಗ ವಿದ್ಯುತ್ ಚಾಲಿತವಾಗಿದೆ. ಕಳೆದ ವರ್ಷ ನವೆಂಬರ್ ವರೆಗೆ, ಅದರ ಸಂಪೂರ್ಣ ಜಾಲದ ೯೯ ಪ್ರತಿಶತಕ್ಕೂ ಹೆಚ್ಚು ಈಗಾಗಲೇ ವಿದ್ಯುದ್ದೀಕರಿಸಲ್ಪಟ್ಟಿದ್ದು, ಇದು ಒಂದು ಪ್ರಮುಖ ಮೈಲಿಗಲ್ಲನ್ನು ಗುರುತಿಸಿದೆ. ವಿದ್ಯುದ್ದೀಕರಣದ ವೇಗ ತೀವ್ರವಾಗಿ ಏರಿದೆ - ೨೦೦೪ ಮತ್ತು ೨೦೧೪ ರ ನಡುವೆ ದಿನಕ್ಕೆ ಸುಮಾರು ಒಂದೂವರೆ ಕಿಲೋಮೀಟರ್‌ಗಳಿಂದ ಕಳೆದ ಆರು ವರ್ಷಗಳಲ್ಲಿ ದಿನಕ್ಕೆ ೧೫ ಕಿಲೋಮೀಟರ್‌ಗಳಿಗಿಂತ ಹೆಚ್ಚು. ಭಾರತೀಯ ರೈಲ್ವೆಗಳು ನವೀಕರಿಸಬಹುದಾದ ಶಕ್ತಿಯ ಬಳಕೆಯನ್ನು ವಿಸ್ತರಿಸಿದೆ, ಸೌರಶಕ್ತಿ ಸಾಮರ್ಥ್ಯವು ಕಳೆದ ವರ್ಷ ನವೆಂಬರ್ ವೇಳೆಗೆ ಸುಮಾರು ೯೦೦ ಮೆಗಾವ್ಯಾಟ್‌ಗಳನ್ನು ತಲುಪಿದೆ, ೨೦೧೪ ರಲ್ಲಿ ಇದು ಕೇವಲ ನಾಲ್ಕು ಮೆಗಾವ್ಯಾಟ್‌ಗಳಿಗಿಂತ ಕಡಿಮೆ ಇತ್ತು.

**<><><*><><<>**

೨೦೨೫-೨೬ರ ಕೇಂದ್ರ ಬಜೆಟ್‌ನಲ್ಲಿ ಮಾಡಿದ ಘೋಷಣೆಯ ಅನುಷ್ಠಾನವನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ವ್ಯವಹಾರಗಳ ಇಲಾಖೆಯು ಮೂರು ವರ್ಷಗಳ ಸಾರ್ವಜನಿಕ ಖಾಸಗಿ ಸಹಭಾಗಿತ್ವ-ಪಿಪಿಪಿ ಯೋಜನೆಯ ಪೈಪ್‌ಲೈನ್ ಅನ್ನು ರಚಿಸಿದೆ. ಈ ಯೋಜನೆಯ ಪೈಪ್‌ಲೈನ್ ಕೇಂದ್ರ ಮೂಲಸೌಕರ್ಯ ಸಚಿವಾಲಯಗಳು ಮತ್ತು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ೮೫೨ ಯೋಜನೆಗಳನ್ನು ಒಳಗೊಂಡಿದೆ. ಇವುಗಳ ಒಟ್ಟು

ಯೋಜನಾ ವೆಚ್ಚ ೧೭ ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚು. ಹೂಡಿಕೆದಾರರು, ಅಭಿವರ್ಧಕರು ಮತ್ತು ಇತರ ಪಾಲುದಾರರು ಹೆಚ್ಚು ಮಾಹಿತಿಯುಕ್ತ ಯೋಜನೆ ಮತ್ತು ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳಲು ಅನುವು ಮಾಡಿಕೊಡಲು ಸಂಭಾವ್ಯ ಪಿಪಿಪಿ ಯೋಜನೆಗಳ ಆರಂಭಿಕ ಗೋಚರತೆಯನ್ನು ಪೈಪ್‌ಲೈನ್ ಒದಗಿಸುತ್ತದೆ ಎಂದು ಇಲಾಖೆ ಹೇಳಿದೆ.

**<>><><*><><<>**

ಪ್ರಧಾನ ಮಂತ್ರಿಗಳ ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನಕ್ಕಾಗಿ ಪ್ರಧಾನ ಮಂತ್ರಿಗಳ ಪ್ರಮುಖ ವೇದಿಕೆಯಾದ ಪ್ರಗತಿ, ತನ್ನ ೫೦ ನೇ ಸಭೆಯನ್ನು ಯಶಸ್ವಿಯಾಗಿ ನಡೆಸುವುದರೊಂದಿಗೆ ಮಹತ್ವದ ಮೈಲಿಗಲ್ಲನ್ನು ಗುರುತಿಸಿದೆ. ೨೦೧೫ ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇದನ್ನು ಪ್ರಾರಂಭಿಸಿದ ನಂತರ, ಪ್ರಗತಿಯು ನೇರ ಪರಿಶೀಲನೆಯ ಮೂಲಕ ಪ್ರಮುಖ ಮೂಲಸೌಕರ್ಯ ಯೋಜನೆಗಳು ಮತ್ತು ಸಾರ್ವಜನಿಕ ಕುಂದುಕೊರತೆಗಳ ನೈಜ-ಸಮಯದ ಮೇಲ್ವಿಚಾರಣೆ ಮತ್ತು ಪರಿಹಾರವನ್ನು ಸಕ್ರಿಯಗೊಳಿಸುವ ಮೂಲಕ ಆಡಳಿತವನ್ನು ಪರಿವರ್ತಿಸಿದೆ. ಇಂದು, ಈ ವಿಶೇಷ ಸರಣಿಯಲ್ಲಿ, ಬ್ರಹ್ಮಪುತ್ರ ನದಿಯ ಮೇಲಿನ ಬೋಗಿಬೀಲ್ ರೈಲು-ಕಮ್-ರಸ್ತೆ ಸೇತುವೆ ಕುರಿತು ಮಾಹಿತಿ ಮೂಡಿ ಬರಲಿದೆ.  ಭಾರತದ ಅತಿ ಉದ್ದದ ಮತ್ತು ಏಷ್ಯಾದ ಎರಡನೇ ಅತಿ ಉದ್ದದ ರೈಲು-ಕಮ್-ರಸ್ತೆ ಸೇತುವೆಯಾದ ಬೋಗಿಬೀಲ್ ಸೇತುವೆಯು ದೇಶದ ಈಶಾನ್ಯ ಭಾಗದ ಜೀವನಾಡಿಯಾಗಿದೆ. ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ನಡುವಿನ ಸಂಪರ್ಕವನ್ನು ಸುಗಮಗೊಳಿಸುತ್ತದೆ. ೪.೯ ಕಿಲೋಮೀಟರ್ ಉದ್ದದ ಈ ಸೇತುವೆಯು ಅಪ್ಪರ್ ಅಸ್ಸಾಂ ಮತ್ತು ಅರುಣಾಚಲ ಪ್ರದೇಶದಲ್ಲಿ ವಾಸಿಸುವ ಸುಮಾರು ೫೦ ಲಕ್ಷ ಜನರಿಗೆ ಸಂಪರ್ಕವನ್ನು ಹೆಚ್ಚಿಸಿದೆ. ಈ ಯೋಜನೆಗೆ ೧೯೯೭-೯೮ರಲ್ಲಿ ಅನುಮೋದನೆ ನೀಡಲಾಗಿತ್ತು, ಆದರೆ ೨೦೦೨ ರ ಏಪ್ರಿಲ್ ೨೧, ರಂದು ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದಲ್ಲಿ ಕೆಲಸ ಪ್ರಾರಂಭವಾಯಿತು. ನಿರ್ಮಾಣ ಪ್ರಾರಂಭವಾದ ಸುಮಾರು ೧೩ ವರ್ಷಗಳ ನಂತರವೂ, ಬೋಗಿಬೀಲ್ ಸೇತುವೆ ಯೋಜನೆಯು ಕೇವಲ ಶೇಕಡಾ ೭೨ ರಷ್ಟು ಭೌತಿಕ ಪ್ರಗತಿಯನ್ನು ಸಾಧಿಸಿತು. ಆದರೆ ವೆಚ್ಚವು ಐದು ಪಟ್ಟು ಹೆಚ್ಚಾಗಿದೆ. ೨೦೧೫ ರ ಮೇ ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಗತಿಯಡಿ ಈ ಯೋಜನೆಯನ್ನು ಪರಿಶೀಲಿಸಿದರು. ಪ್ರಾದೇಶಿಕ ಸಂಪರ್ಕ ಮತ್ತು ರಾಷ್ಟ್ರೀಯ ಭದ್ರತೆಯಲ್ಲಿ ಇದರ ನಿರ್ಣಾಯಕ ಪಾತ್ರವನ್ನು ಗುರುತಿಸಿದ ಪ್ರಧಾನಿ, ಯೋಜನೆಯನ್ನು ಮಿಷನ್ ಮೋಡ್‌ನಲ್ಲಿ ಕೈಗೆತ್ತಿಕೊಳ್ಳಬೇಕೆಂದು ನಿರ್ದೇಶಿಸಿದರು. ಪ್ರಧಾನಿ ಮೋದಿಯವರ ಹಸ್ತಕ್ಷೇಪದ ನಂತರವೇ ಕೆಲಸ ವೇಗ ಪಡೆಯಿತು. ಇದು ೨೦೧೮ ರ ಡಿಸೆಂಬರ್ ೨೫ ರಂದು ಸೇತುವೆಯನ್ನು ಪೂರ್ಣಗೊಳಿಸಲು ಕಾರಣವಾಯಿತು. ಬ್ರಹ್ಮಪುತ್ರ ನದಿಯ ಮೇಲಿನ ಬೋಗಿಬೀಲ್ ರೈಲು ಮತ್ತು ರಸ್ತೆ ಸೇತುವೆಯಂತಹ ನಿರ್ಣಾಯಕ ಯೋಜನೆಗಳ ಕಾರ್ಯಾರಂಭಕ್ಕೆ ಪ್ರಗತಿ ಸಹಾಯ ಮಾಡಿದೆ ಎಂದು ಸಂಪುಟ ಕಾರ್ಯದರ್ಶಿ ಟಿ.ವಿ.ಸೋಮನಾಥನ್ ಹೇಳಿದ್ದಾರೆ.  ಬೋಗಿಬೀಲ್ ರೈಲು-ಕಮ್-ರೋಡ್ ಸೇತುವೆಯು ಪೂರ್ವ ಪ್ರದೇಶದಲ್ಲಿ ರಾಷ್ಟ್ರೀಯ ಭದ್ರತೆ ಮತ್ತು ಕಾರ್ಯತಂತ್ರದ

ಸನ್ನದ್ಧತೆಯನ್ನು ಬಲಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ರಕ್ಷಣಾ ಪಡೆಗಳು ಮತ್ತು ಅವರ ಉಪಕರಣಗಳ ತ್ವರಿತ ಚಲನೆಯನ್ನು ಸುಗಮಗೊಳಿಸುತ್ತದೆ. ಈ ಸೇತುವೆಯು ಬ್ರಹ್ಮಪುತ್ರದಾದ್ಯಂತ ತ್ವರಿತ, ಅಡೆತಡೆಯಿಲ್ಲದ ಮತ್ತು ಎಲ್ಲಾ ಹವಾಮಾನ ಸಂಪರ್ಕವನ್ನು ಖಾತ್ರಿಪಡಿಸಿದೆ.

**<>><><*><><<>**

ಭಾರತ-ಲಕ್ಸೆಂಬರ್ಗ್ ಸಂಬಂಧಗಳು ಬಹಳ ದೂರ ಸಾಗಿವೆ ಮತ್ತು ಭಾರತವು ಲಕ್ಸೆಂಬರ್ಗ್ ಅನ್ನು ಮುಖ್ಯವಾದ ಪಾಲುದಾರ ದೇಶವಾಗಿ ನೋಡುತ್ತದೆ ಎಂದು ವಿದೇಶಾಂಗ ಸಚಿವ ಡಾ. ಎಸ್.ಜೈಶಂಕರ್ ಹೇಳಿದ್ದಾರೆ. ಲಕ್ಸೆಂಬರ್ಗ್‌ನ ವಿದೇಶಾಂಗ ಸಚಿವ ಕ್ಸೇವಿಯರ್ ಬೆಟ್ಟೆಲ್ ಅವರೊಂದಿಗಿನ ಭೇಟಿಯ ಸಂದರ್ಭದಲ್ಲಿ ಡಾ. ಎಸ್.ಜೈಶಂಕರ್, ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಸಂಬಂಧಗಳನ್ನು ಗಾಢವಾಗಿಸಲು ಪ್ರಯತ್ನಿಸಿದ್ದಕ್ಕಾಗಿ ಲಕ್ಸೆಂಬರ್ಗ್‌ಗೆ ಧನ್ಯವಾದ ಅರ್ಪಿಸಿದರು. ನಂತರ ಸಚಿವರು, ಲಕ್ಸೆಂಬರ್ಗ್‌ನ ಗ್ರ್ಯಾಂಡ್ ಡ್ಯೂಕ್ ಗಿಲ್ಲೌಮ್ ಅವರನ್ನು ಭೇಟಿ ಮಾಡಿದರು. ಇದಕ್ಕೂ ಮೊದಲು, ಡಾ. ಎಸ್.ಜೈಶಂಕರ್, ಲಕ್ಸೆಂಬರ್ಗ್ ಪ್ರಧಾನಿ ಲುಕ್ ಫ್ರೀಡೆನ್ ಅವರನ್ನು ಭೇಟಿಯಾಗಿ, ಮಾತುಕತೆ ನಡೆಸಿದರು. ಈ ವೇಳೆ ಹಣಕಾಸು ಸೇವೆಗಳು, ಹೂಡಿಕೆಗಳು, ತಂತ್ರಜ್ಞಾನ ಮತ್ತು ನಾವೀನ್ಯತೆಗಳಲ್ಲಿ ಭಾರತ ಮತ್ತು ಲಕ್ಸೆಂಬರ್ಗ್ ನಡುವೆ ಬೆಳೆಯುತ್ತಿರುವ ಸಹಕಾರದ ಬಗ್ಗೆ ಚರ್ಚಿಸಲಾಯಿತು ಎಂದು ಸಾಮಾಜಿಕ ಜಾಲತಾಣದಲ್ಲಿ ಡಾ. ಜೈಶಂಕರ್ ಹೇಳಿದ್ದಾರೆ.

**<>><><*><><<>**

ದೇಶದ ಐದು ಶಾಸ್ತ್ರೀಯ ಭಾಷೆಗಳನ್ನು ಪ್ರತಿನಿಧಿಸುವ ೫೫ ಅಪರೂಪದ ಮತ್ತು ಅಮೂಲ್ಯವಾದ ಸಾಹಿತ್ಯ ಕೃತಿಗಳನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಬಿಡುಗಡೆ ಮಾಡಿದರು. ಇವು ಕನ್ನಡ, ತಮಿಳು, ತೆಲುಗು, ಮಲಯಾಳಂ, ಮತ್ತು ಒಡಿಯಾ ಭಾಷೆಗಳ ಸಾಹಿತ್ಯ ಕೃತಿಗಳಾಗಿವೆ. ಈ ಪುಸ್ತಕಗಳನ್ನು ಭಾರತೀಯ ಭಾಷೆಗಳ ಕೇಂದ್ರ ಪ್ರಕಟಿಸಿದೆ. ಸಚಿವರು ೧೩ ಪುಸ್ತಕಗಳ ಜೊತೆಗೆ ಶಾಸ್ತ್ರೀಯ ತಮಿಳು ಭಾಷಾ ಕೇಂದ್ರದ ತಿರುಕ್ಕುರಲ್ ಸಂಕೇತ ಭಾಷಾ ಸರಣಿಯನ್ನು ಬಿಡುಗಡೆ ಮಾಡಿದರು. ಈ ಕುರಿತು ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಧರ್ಮೇಂದ್ರ ಪ್ರಧಾನ್, ಭಾರತದ ಭಾಷೆಗಳು ರಾಷ್ಟ್ರದ ಸಮಾಜವನ್ನು ಸಂಪರ್ಕಿಸುತ್ತವೆ ಮತ್ತು ಒಗ್ಗೂಡಿಸುತ್ತವೆ. ಎಲ್ಲಾ ಭಾರತೀಯ ಭಾಷೆಗಳು ರಾಷ್ಟ್ರೀಯ ಭಾಷೆಗಳೆಂದು ಪ್ರಧಾನಿ ನರೇಂದ್ರ ಮೋದಿ ಒತ್ತಿ ಹೇಳಿದ್ದಾರೆ. ಕಳೆದ ವರ್ಷ, ಸರ್ಕಾರ, ಐದು ಭಾರತೀಯ ಭಾಷೆಗಳಾದ ಮರಾಠಿ, ತೆಲುಗು, ಬಂಗಾಳಿ, ಅಸ್ಸಾಮಿ, ಪಾಲಿ ಮತ್ತು ಪ್ರಾಕೃತ ಅನ್ನು ಅವುಗಳ ಪ್ರಾಚೀನ ಮೂಲಗಳಿಂದಾಗಿ ಶಾಸ್ತ್ರೀಯ ಭಾಷೆಗಳೆಂದು ಗುರುತಿಸಿದೆ ಎಂದು ಹೇಳಿದರು. ಪ್ರಾಥಮಿಕ ಶಾಲೆಯಿಂದ ಉನ್ನತ ಮಟ್ಟದ ಸಂಶೋಧನೆಯವರೆಗಿನ ಶಿಕ್ಷಣ ಭಾರತೀಯ ಭಾಷೆಗಳಲ್ಲಿರಬೇಕು.

ಎಂಜಿನಿಯರಿಂಗ್ ಮತ್ತು ವೈದ್ಯಕೀಯ ವಿಜ್ಞಾನ ಕೋರ್ಸ್‌ಗಳನ್ನು ಭಾರತೀಯ ಭಾಷೆಗಳಲ್ಲಿ ವಿನ್ಯಾಸಗೊಳಿಸಲಾಗಿದೆ ಎಂದು ಅವರು ತಿಳಿಸಿದರು.

**<>><><*><><<>**

ರಷ್ಯಾ-ಉಕ್ರೇನ್ ಸಂಘರ್ಷವನ್ನು ಕೊನೆಗೊಳಿಸುವ ರಾಜತಾಂತ್ರಿಕ ವಿಧಾನದ ಕುರಿತು ಪ್ಯಾರಿಸ್‌ನಲ್ಲಿ ಚರ್ಚಿಸಿದ ನಂತರ, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ನಿನ್ನೆ ಸ್ಟೀವ್ ವಿಟ್ಕಾಫ್ ಮತ್ತು ಜೇರೆಡ್ ಕುಶ್ನರ್ ಒಳಗೊಂಡ ಅಮೆರಿಕ ನಿಯೋಗದೊಂದಿಗೆ ಸಭೆ ನಡೆಸಿದರು. ಭದ್ರತಾ ಖಾತರಿಗಳು, ಕದನ ವಿರಾಮದ ಮೇಲ್ವಿಚಾರಣೆ ಮತ್ತು ಪುನರ್‌ನಿರ್ಮಾಣ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸಹಾಯ ಒದಗಿಸಲು ಅಮೆರಿಕ ಸಿದ್ಧತೆಗೆ ಝೆಲೆನ್ಸ್ಕಿ ಧನ್ಯವಾದ ಅರ್ಪಿಸಿದರು. ಯುದ್ಧವನ್ನು ಕೊನೆಗೊಳಿಸುವ ರಾಜತಾಂತ್ರಿಕ ಮಾರ್ಗದ ಕುರಿತು ಎರಡೂ ದೇಶಗಳು ಚರ್ಚೆಗಳನ್ನು ಮುಂದುವರೆಸಿವೆ ಎಂದು ಸಾಮಾಜಿಕ ಜಾಲತಾಣದಲ್ಲಿ ಝೆಲೆನ್ಸ್ಕಿ ಹೇಳಿದರು. ಏತನ್ಮಧ್ಯೆ, ಉಕ್ರೇನ್‌ನಲ್ಲಿ ಶಾಂತಿಗಾಗಿ ಭದ್ರತಾ ಖಾತರಿಗಳ ಕುರಿತು ಸಭೆಯು ಅಭೂತಪೂರ್ವ ಏಕತೆಯನ್ನು ಪ್ರತಿಬಿಂಬಿಸಿದೆ ಎಂದು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಹೇಳಿದ್ದಾರೆ.

**<>><><*><><<>**

ಬ್ರಿಟಿಷ್ ಜೂನಿಯರ್ ಓಪನ್ ಸ್ಕ್ವಾಷ್ ಚಾಂಪಿಯನ್‌ಶಿಪ್‌ನಲ್ಲಿ ಅಗ್ರ ಶ್ರೇಯಾಂಕಿತ ಭಾರತದ ಅನಾಹತ್ ಸಿಂಗ್, ನಿನ್ನೆ ನಡೆದ ಸೆಮಿಫೈನಲ್‌ನಲ್ಲಿ ಈಜಿಪ್ಟ್‌ನ ಮಲಿಕಾ ಎಲ್ ಕರಾಕ್ಸಿ ವಿರುದ್ಧ ನೇರ ಸೆಟ್‌ಗಳಿಂದ ಜಯ ಸಾಧಿಸುವ ಮೂಲಕ ತಮ್ಮ ಮೊದಲ ಮಹಿಳಾ ಅಂಡರ್-೧೯ ಫೈನಲ್‌ಗೆ ಮುನ್ನಡೆದರು. ೧೨ ಬಾರಿ ಪಿಎಸ್‌ಎ ಟೂರ್ ಪ್ರಶಸ್ತಿ ವಿಜೇತರಾಗಿರುವ ೧೭ ವರ್ಷದ ಅನಾಹತ್ ಸಿಂಗ್, ಇಂಗ್ಲೆಂಡ್‌ನ ಬರ್ಮಿಂಗ್ಹ್ಯಾಮ್ ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ಎಲ್ ಕರಾಕ್ಸಿ ಅವರನ್ನು ೧೧-೮, ೧೧-೭, ೧೧-೯ ಸೆಟ್‌ಗಳಿಂದ ಸೋಲಿಸಿದರು. ಫೈನಲ್‌ನಲ್ಲಿ ಅವರು ಯುರೋಪಿಯನ್ ಜೂನಿಯರ್ ಚಾಂಪಿಯನ್ ಮತ್ತು ಫ್ರಾನ್ಸ್‌ನ ಎರಡನೇ ಶ್ರೇಯಾಂಕಿತ ಲಾರೆನ್ ಬಾಲ್ಟಯನ್ ಅವರನ್ನು ಎದುರಿಸಲಿದ್ದಾರೆ. ೨೦೦೫ ರಲ್ಲಿ ಜೋಶ್ನಾ ಚಿನಪ್ಪ ನಂತರ ಅಂಡರ್-೧೯ ಪ್ರಶಸ್ತಿಯನ್ನು ಗೆದ್ದ ಎರಡನೇ ಭಾರತೀಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲು ಅನಾಹತ್ ಸಿಂಗ್ ತವಕಿತರಾಗಿದ್ದಾರೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**